**ಸಾಕ್ಷಿಯನ್ನು ದಿನಾಂಕಃ 01-04-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.**

**ಪಾಟೀಸವಾಲುಃ 3 ನೇ ಪ್ರತಿವಾದಿ ಪರ ವಕೀಲರವರಿಂದಃ**

1. ನನ್ನ ಗಂಡನಾದ ಕೊಟ್ರೇಶಪ್ಪ ಇವರು 35 ವರ್ಷಗಳ ಹಿಂದೆ ಮೃತ ಪಟ್ಟಿರುವರು. ನನ್ನ ಗಂಡ ಕೊಟ್ರೇಶಪ್ಪನ ಹೆಸರಿನಲ್ಲಿ 5 ಎಕರೆ ಜಮೀನು ಮತ್ತು 1 ಮನೆ ಇತ್ತು. ಸದರಿ ಮನೆಯಲ್ಲಿ ಈಗ ನಮ್ಮವರೇ ವಾಸ ಇದ್ದಾರೆ. ನನ್ನ ಯಜಮಾನರು ತೀರಿಕೆಕೂಂಡ ನಂತರ ಮನೆಯ ಯಜಮಾನಿಕೆಯನ್ನು ನನ್ನ ಮಗನೇ ಮಾಡುತ್ತಿದ್ದನು ಅಂದರೆ ಸರಿ. ನನ್ನ ಮಗ ಮಣಿಪಾಲು ಅಸ್ಪತ್ರೆಯಲ್ಲಿ ಮೃತ ಪಟ್ಟನು ಅಂದರೆ ಸರಿ. ನನ್ನ ಮಗನಿಗೆ ಸಕ್ಕರೆ ಕಾಯಿಲೆ ಇತ್ತು ಅಂದರೆ ಸರಿ. ಆತನಿಗೆ ಲಿವರ್ ಫೇಲೂರ್ ಆಗಿತ್ತು ಅಂದರೆ ಇರಬಹುದು. ನನ್ನ ಮಗ ಮನೆಯ ಯಜಮಾನಿಕೆಯನ್ನು ನೋಡಿಕೊಳ್ಳುತ್ತಿದಾಗ ಬಸ್ಸನ್ನು ಖರೀದಿ ಮಾಡಿದ್ದನು ಅಂದರೆ ಸರಿ. ಸದರಿ ಬಸ್ಸು ಹಿಕ್ಕಿಂಬೇರಿ ಕೆರೆ ಬಳಿ ಅಪಘಾತಕ್ಕೆ ಒಳಗಾಗಿತ್ತು ಅಂದರೆ ಸರಿ. ಸದರಿ ಅಪಘಾತದಲ್ಲಿ ಅನೇಕ ಜನರು ಗಾಯಗೊಂಡಿದ್ದರು ಅಂದರೆ ಸರಿ. ಸದರಿ ಗಾಯಗೊಂಡವರಿಗೆ ಪರಿಹಾರವನ್ನು ಪಡೆಯಲು ನನ್ನ ಮಗ ಅನೇಕ ಜನರ ಬಳಿ ಸಾಲ ಮಾಡಿದ್ದನು ಅಂದರೆ ಸರಿ.

2. ನನ್ನ ಮಗ ಕರಿಬಸ್ಸಮ್ಮ ಚೆಲ್ಲಿ ಇವರಿಂದ ಸಾಲವನ್ನು ಪಡೆದು ಅದರ ಬದ್ರತೆಗಾಗಿ ಕರಾರು ಪತ್ರವನ್ನು ಬರೆದುಕೊಟ್ಟಿದ್ದನು ಅಂದರೆ ಸರಿ. ಸಾಲ ಮಾಡಿದ್ದನ್ನು ತೀರಿಸಲು ನನ್ನ ಮಗ 1 ನೇ ದಾವಾ ಅಸ್ತಿಯನ್ನು 3 ನೇ ಪ್ರತಿವಾದಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಮಾರಾಟ ಮಾಡಿರುವನು ಅಂದರೆ ಸರಿ. ನನ್ನ ಮಗ

ಹಾಗೂ ಸೊಸೆ ಅನೇಕ ಜನರ ಬಳಿ ಸಾಲವನ್ನು ಮಾಡಿದ್ದರು ಅಂದರೆ ಸರಿ. ಖರೀದಿ ಪತ್ರದ ಅಧಾರದ ಮೇಲೆ 3 ನೆ ಪ್ರತಿವಾದಿಯ ಹೆಸರಿಗೆ ಹಕ್ಕು ಬದಲಾವಣೆ ಆಗಿರುತ್ತದೆ ಅಂದರೆ ಸರಿ.

*(ಈ ಹಂತದಲ್ಲಿ ವಾದಿ ಪರ ವಕೀಲರು ಸಾಕ್ಷಿದಾರರಿಗೆ ಕಿವಿಯು ಸರಿಯಾಗಿ ಕೇಳುವುದಿಲ್ಲ ಮತ್ತು ಆಕೆಯು ಸಾಕ್ಷಿಯನ್ನು ನೀಡುವ ಪರಿಸ್ತಿತಿಯ ಬಗ್ಗೆ ಸಂದೇಹ ಇರುತ್ತದೆ ಎಂದು ನುಡಿದಿರುವರು. ಕಡತವನ್ನು ಪರೀಶೀಲಿಸಲಾಗಿದ ಸಾಕ್ಷಿದಾರರು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿರುವುದು ಮತ್ತು ವಾದಿ ಪರ ವಕೀಲರಿಂದ ಪಾಟೀ ಸವಾಲಗಿ ಒಳಪಟ್ಟಿರುವುದು ಕಂಡು ಬರುತ್ತದೆ. 1 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿದಾರರಿಗೆ ಸ್ವಲ್ಪ ಕಿವಿಯ ಸಮಸ್ಯ ಇದ್ದು ಸಾಕ್ಷಿ ನುಡಿಯಲು ಸಮಸ್ದ ಇರುವರು ಎಂದು ನುಡಿದಿರುವರು. ಈ ಹಂತದಲ್ಲಿ ನ್ಯಾಯಾಲಯವು ಸಾಕ್ಷಿದಾರರು ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ನೀಡಿರುವುದನ್ನು ಗಮನಿಸಿರುತ್ತದೆ. ಆದ್ದರಿಂದ ವಾದಿ ಪರ ವಕೀಲರ ಆಕ್ಷೇಪವನ್ನು ತಳ್ಳಿಹಾಕಲಾಗಿದೆ. ಪಾಟೀ ಸವಾಲನ್ನು ಮುಂದುವರಸೆಲಾಯಿತು.)*

3. ನನ್ನ ಮಗ 3 ನೇ ಪ್ರತಿವಾದಿಗೆ ಕುಟುಂಬದ ಒಳಿತಿಗಾಗಿ ಮಾರಾಟ ಮಾಡಿರುವನು ಅಂದರೆ ಸಾಕ್ಷಿಯು ಆರಂಭದಲ್ಲಿ ಹೌದು ಎಂದು ನುಡಿದು ನಂತರ ನನಗೆ ಗೊತ್ತಿಲ್ಲ ಎಂದು ನುಡಿದರು. 3 ನೇ ಪ್ರತಿವಾದಿಯು ಖರೀದಿ ಮಾಡಿದ ಅಸ್ತಿಯನ್ನು ಆತನೇ ಬಿತ್ತುವುದು ಬೆಳೆಯುವುದು ಮಾಡುತ್ತಿರುವನು ಅಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ನನಗೆ ತಿಳಿಯಂತೆ ಮಾಡುತ್ತಿರುವರು ಎಂದು ನುಡಿದರು. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನಾನು ದೇವರ ಸತ್ಯವಾಗಿ ಹೇಳುತ್ತಿದ್ದೇನೆ ಎಂದು ನುಡಿದರು.

**ಸಾಕ್ಷಿಯ ಸಹಿ** 01.04.2026

ನಾನು ಈಗ ಶಾಮನೂರಿನಲ್ಲಿ ನನ್ನ ಮಗಳ ಮನೆಯಲ್ಲಿ ವಾಸ ಇದ್ದೇನೆ. ಕಳೆದ 10-15 ವರ್ಷಗಳಿಂದ ನಾನು ಅಲ್ಲಿಯೇ ನನ್ನ ಮಗಳ ಮನೆಯಲ್ಲಿ ವಾಸ ಇದ್ದೇನೆ. 3 ನೇ ಪ್ರತಿವಾದಿಗೆ ಸೇರಿದ ಅಸ್ತಿಯನ್ನು ಕಬಳಿಸಲು ಸಲ್ಲಿಸಲಾದ ಸುಳ್ಳು ದಾವೆಗೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹಿತ ನನ್ನ ಸೊಸೆಗೂ ಮೊಮ್ಮಗನಿಗೂ ಅಕೂಲವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

01-04-2026
**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 01.04.2026